**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 397/2020

Cw-8 Pw-5

| | |
|---|---|
| ಹೆಸರು | ಅಬ್ದುಲರಜಾಕ ತಂದೆ ಹೈದರಸಾಬ ಅಪರಾಧ |
| ವಯಸ್ಸು | 63 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಜಮಖಂಡಿ |

ದಿನಾಂಕಃ07-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ನನ್ನ ಮಗನ ಹೆಸರು ಉಮರ ಪಾರುಕ ಆಗಿದ್ದು ದಿನಾಂಕ 22-11-2019 ರಂದು ನಾನು ಇಚಲಕರಂಜಿಗೆ ದಿನಕಾರ್ಯವನ್ನು ಮುಗಿಸಿಕೊಂಡು ಜಮಖಂಡಿಗೆ ಬಂದು ಬಸ್ಸ ನಿಲ್ದಾಣಕ್ಕೆ ಬಂದು ನನ್ನ ಮಗನಿಗೆ ಪೋನ ಕರೆ ಮಾಡಿ ದ್ವಿಚಕ್ರ ವಾಹನದ ಮೇಲೆ ಬರಲು ಸೂಚಿಸಿದ ಮೇಲೆ ಆತನು ಜಮಖಂಡಿ ಮುದೋಳ ಬೈಪಾಸ ರಸ್ತೆಯ ಮೇಲೆ ಬರುವಾಗ ಲಕ್ಕನ ಕೆರೆ ಹತ್ತಿರ ಅಪಘಾತವಾಗಿರುತ್ತದೆ . ನನಗೆ ಸ್ಥಳದಲ್ಲಿ ಇದ್ದ ಜನರು ಪೋನ ಕರೆ ಮಾಡಿ ಅಪಘಾತದ ವಿಚಾರವನ್ನು ತಿಳಿಸಿದ ಮೇಲೆ ನಾನು ನೇರವಾಗಿ ಜಮಖಂಡಿ ಕೆ ಎಲ್ ಇ ಆಸ್ಪತ್ರೆಗೆ ಹೋದೆನು ಅಲ್ಲಿ ಹೋಗಿ ನೋಡಲಾಗಿ ಮಗ ಇತನು ಮರಣ ಹೊಂದಿದ್ದ . ನಂತರ ನನ್ನ ಮಗ ಶವವನ್ನು ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಶವಗಾರ ಕೋಣೆಯಲ್ಲಿ ಹಾಕಿರುತ್ತಾರೆ . ಆತನಿಗೆ ನೋಡಲಾಗಿ ಅತನ ತಲೆಯ ಹಿಂದುಗಡೆ ಬಾರಿ ಗಾಯವಾಗಿ ರಕ್ತ ಸೋರುತ್ತಿತ್ತು . ಅಪಘಾತವೂ 04-45 ಗಂಟೆಗೆ ಆಗಿತ್ತು . ನಂತರ ನಾನು ಸ್ಥಳದಲ್ಲಿ ಇದ್ದ ಜನರನ್ನು ಕೇಳಿ ಅಪಘಾತದ ವಿಚಾರವನ್ನು ತಿಳಿದುಕೊಂಡಿರುತ್ತೇನೆ . ಅಪಘಾತವೂ ಕಾರ ವಾಹನದಿಂದ ಆಗಿರುತ್ತದೆ . ಸದರಿ ಕಾರ ವಾಹನದ ನಂಬರ ಮತ್ತು ಕಾರ ಚಾಲಕ ಯಾರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ ನನ್ನ ಮಗ ಎಚ್ ಎಫ್ ಡಿಲಕ್ಷ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಅದರ ನೋಂದಣಿ ಸಂಖ್ಯೆ ನನಗೆ ನೆನಪಿಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ .

***ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಮಾನ್ಯ ಸಸಅ ರವರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.***

**ಪಾಟೀ ಸವಾಲುಃ ಮಾನ್ಯ ಎಪಿಪಿ ವರಿಂದ-** ಅಪಘಾತ ದಿನದಂದು ಅಲ್ಲೆ ಇದ್ದ ಚಾಸಾ- 6 ರವರಿಗೆ ವಿಚಾರಿಸಲಾಗಿ ದಿನಾಂಕ 22-11-2019 ರಂದು ತಾನು ಸ್ವಂತ ಕೆಲಸದ ಮೇಲೆ

ಚೌಡಯ್ಯಾ ನಗರದ ಕ್ರಾಸದ ಹತ್ತಿರದಲ್ಲಿ ಇದ್ದಾಗ ಜಮಖಂಡಿ ಮುದೋಳ ಬೈ ಪಾಸ ರಸ್ತೆ ಹತ್ತಿರ ಅಂದರೆ ಲಕ್ಕನಕೆರೆ ಇದ್ದ ಕಡೆಯಿಂದ ಮುದೋಳ ರೋಡ ರಸ್ತೆಯ ಮೇಲೆ ಒಬ್ಬ ಕಾರ ನಂಬರ ಕೆ ಎ -48 ಎಂ 9463 ನೇದ್ದರ ಚಾಲಕ ಸಂತೋಷ ಕರ್ಲಟ್ಟಿ ಇತನು ತನ್ನ ಕಾರನ್ನು ಅತೀ ವೇಗ ಮತ್ತು ನಿಸ್ಕಾಜತದಿಂದ ಚಲಾಯಿಸಿಕೊಂಡು ಬಂದು ನನ್ನ ಮಗನ ದ್ವಿಚಕ್ರ ವಾಹನ ಸಂಖ್ಯೆ ಕೆ ಎ-48-ಕೆ -5965 ಕ್ಕೆ ಹಾಯಿಸಿದ್ದರಿಂದ ನನ್ನ ಮಗನ ತಲೆಯ ಹಿಂಬದಿಗೆ ಬಾರಿ ಸ್ವರೂಪದ ಗಾಯಗಳು ಆಗಿ 108 ಅಂಬುಲೆನ್ಸದಲ್ಲಿ ಅತನನ್ನು ಹಾಕಿಕೊಂಡು ಜಮಖಂಡಿ ಕೆ ಎಲ್ ಇ ಆಸ್ಪತ್ರೆಗೆ ಬರುವಾಗಿ ಸಂಜೆ 05-00 ಗಂಟೆ ಆಗಿತ್ತು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು ಗೈರು ಹಾಜರ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ